ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1034/2016

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಕುಮಾರ ಸ್ವಾಮಿ | ದಿನಾಂಕಃ 09.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಕೆಂಪಪ್ಪ | |
| ವಯಸ್ಸು | : | 41 ವರ್ಷ | |
| ಉದ್ಯೋಗ | : | ಪೋಲೀಸ್ ಪೇದೆ, ಪೂರ್ವ ಪೋಲೀಸ್ ಠಾಣೆ | **CW-2** |
| ವಾಸಸ್ಥಳ | : | ಚಾಮರಾಜನಗರ | **PW-2** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ನಾನು 2015 ರಿಂದ 2021 ರವರೆಗೆ ನಾನು ಚಾಮರಾಜನಗರ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ 1 ನನ್ನ ಸಹೋದ್ಯೋಗಿ ಇದ್ದು ಪರಿಚಯ. ಆರೋಪಿಯನ್ನು ನಾನು ನೋಡಿರುತ್ತೇನೆ. ದಿಃ06.04.2016 ರಂದು ನಾನು ಚಾಸಾ 14 ರವರು ನನ್ನನ್ನು ಕರೆದು ಉಡಿಗಾಲ ಪೋಲೀಸ್ ಠಾಣೆಗೆ ಹೋಗಿ ಪುಟ್ಟಮ್ಮನವರು ದೂರು ನೀಡಿದ ಕುರಿತು ಚಾಸಾ 1 ರವರನ್ನು ಉಡಿಗಾಲ ಉಪಠಾಣೆಯಲ್ಲಿ ಕರೆದುಕೊಂಡು ಆರೋಪಿಯ ಮನೆಗೆ ಹೋಗಿ ನೋಟೀಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗಲು ಕರೆದುಕೊಂಡು ಬನ್ನಿ ಎಂದು ಆದೇಶ ಮಾಡಿದ್ದು ನಾನು ಆ ಮಧ್ಯಾಹ್ನ 12.00 ಗಂಟೆಗೆ ಉಡಿಗಾಲ ಉಪಠಾಣೆಗೆ ಹೋಗಿ ಚಾಸಾ 1 ರವರಿಗೆ ವಿಚಾರ ತಿಳಿಸಿ ಅವರೊಂದಿಗೆ ಮಧ್ಯಾಹ್ನ 3.30 ರ ನಂತರ ಆರೋಪಿ ಮನೆಗೆ ಹೋಗಿರುತ್ತೇವೆ. ಆಗ ಆರೋಪಿಯ ಮನೆಗೆ ಬೀಗ ಹಾಕಿರುವುದನ್ನು ಕಂಡು ಪಕ್ಕದಲ್ಲಿರುವ ಚಾಸಾ 3 ರವರ ಅಂಗಡಿಗೆ ಅವರ ಬಳಿ ಮಾತನಾಡುತ್ತಾ ನಿಂತಿದ್ದಾಗ ಸಂಜೆ 6.00 ಗಂಟೆ ಸುಮಾರಿಗೆ ಆರೋಪಿ ಅಲ್ಲಿಗೆ ಬಂದಿರುತ್ತಾನೆ. ಚಾಸಾ 1 ರವರು ಆರೋಪಿಗೆ ಪುಟ್ಟಮ್ಮರವರು ನಿಮ್ಮ ವಿರುದ್ಧ ವರಿಷ್ಟಾಧಿಕಾರಿಳ ಮುಂದೆ ದೂರು ನೀಡಿದ್ದು ನೀವು ವಿಚಾರಣೆಗೆಂದು ಚಾಸಾ 14 ರವರ ಮುಂದೆ ಹಾಜರಾಗಬೇಕಾಗಿರುತ್ತದೆ ಆದ್ದರಿಂದ ನೋಟೀಸ್ ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ. ಆಗ ಆರೋಪಿಯು ಪುಟ್ಟಮ್ಮ ಸುಳ್ಳು ದೂರು ನೀಡಿದ್ದಾಳೆ ಎಂದು ಹೇಳಿ ಚಾಸಾ 1 ರವರನ್ನು ಅವಾಚ್ಯವಾಗಿ ಬೈಯಲು ಪ್ರಾರಂಭಿಸಿರುತ್ತಾರೆ. ನಾನು ಸಮಾಧಾನ ಮಾಡಲು ಹೋದಾಗ ಆರೋಪಿ ನನ್ನ ಸಮವಸ್ತ್ರದ ಕತ್ತು ಪಟ್ಟಿ ಹಿಡಿದು ಕೆಳಗೆ ಬಿಳಿಸಿರುತ್ತಾರೆ. ನನ್ನನ್ನು ಎಬ್ಬಿಸಲು ಬಂದ ಚಾಸಾ 1 ರವರಿಗೆ ಆರೋಪಿಯು ಅಂಗಡಿಯಲ್ಲಿದ್ದ

7 ಅಪ್ ಬಾಟಲನ್ನು ತೆಗೆದುಕೊಂಡು ಕತ್ತಿನ ಎಡಭಾಗಕ್ಕೆ ಹಲ್ಲೆ ಮಾಡಿರುತ್ತಾನೆ. ನಂತರ ಚಾಸಾ 3 ಮತ್ತು 4 ರವರು ಚಾಸಾ 1 ಮತ್ತು ಆರೋಪಿಯನ್ನು ಸಮಾಧಾನ ಪಡಿಸಿರುತ್ತಾರೆ. ನಂತರ ನಾನು ಮತ್ತು ಚಾಸಾ 1 ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದ್ದು ಆಗ ಆರೋಪಿಯು ನನ್ನನ್ನು ಕರೆದರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಹೇಳಿ ಓಡಿ ಹೋಗಿರುತ್ತಾನೆ. ನಾನು ಚಾಸಾ 1 ರವರನ್ನು ಹರವೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ. ಅದೇ ದಿನ ಚಾಸಾ 1 ಠಾಣೆಗೆ ಬಂದು ಆರೋಪಿಯ ವಿರುದ್ಧ ದೂರು ದಾಖಲಿಸಿರುತ್ತಾರೆ.

ದಿಃ06.04.2016 ರಂದು ಠಾಣೆಯಲ್ಲಿ ಮಧ್ಯಾಹ್ನ 12.30 ರಿಂದ 1.30 ರ ಸಮಯದಲ್ಲಿ ತನಿಖಾಧಿಕಾರಿ ನನ್ನಿಂದ ಸಮವಸ್ತ್ರವನ್ನು ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದಲ್ಲಿರುವ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.
ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀಸವಾಲುಃ ಆರೋಪಿ ಪರ ಶ್ರೀಯು ಆರ್ ವಕೀಲರಿಂದಃ

ಮಧ್ಯಾಹ್ನ **3.00** ಗಂಟೆಗೆ ಉಡಿಗಾಲ ಠಾಣೆಯಿಂದ ನಾನು ಮತ್ತು ಚಾಸಾ **1** ರವರು ಹೊರಟಿರುತ್ತೇವೆ. ಆ ದಿನ ಚಾಸಾ **1** ರವರು ದಿನಚರಿಯಲ್ಲಿ ನಾವು ಹೋಗುತ್ತಿರುವ ಕುರಿತು ನಮೂದು ಮಾಡಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಉಡಿಗಾಲ ಉಪಠಾಣೆಯಿಂದ ಕೋಟೆಗೌಡನಹುಂಡಿ ಗ್ರಾಮಕ್ಕೆ **17** ರಿಂದ **18** ಕೀ.ಮೀ. ಅಂತರ ಇರಬಹುದು. ನಾವು ನೇರವಾಗಿ ಆರೋಪಿಯ ಮನೆಗೆ ಹೋಗಿರುತ್ತೇವೆ. ಆ ದಿನ ಆರೋಪಿಯ ಮನೆಯ ಅಕ್ಕಪಕ್ಕದವರನ್ನು ಆರೋಪಿಯ ಕುರಿತು ವಿಚಾರ ಮಾಡಿರುವುದಿಲ್ಲ. ಸಂಜೆ **7.00** ಗಂಟೆಗೆ ಚಾಸಾ **1** ರವರನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿರುತ್ತೇನೆ. ಸುಮಾರು **1** ಗಂಟೆ ಕಾಲಾವಧಿಯರೆಗೆ ನಾವಿಬ್ಬರೂ ಆಸ್ಪತ್ರೆಯಲ್ಲಿ ಇದ್ದೆವು.

ಆ ದಿನ ಚಾಸಾ **14** ರವರು ನನಗೆ ಲಿಖಿತ ಆದೇಶ ನೀಡಿರಲಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆ ದಿನ ನಾವು ಆರೋಪಿಯನ್ನು ವಿಚಾರಣೆಗೆ ಕರೆದುಕೊಂಡು ಬರುವ ಸಲುವಾಗಿ ಕೋಟೆಗೌಡನಹುಂಡಿ ಗ್ರಾಮಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿ ಅವಾಚ್ಯವಾಗಿ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿ ಮು.ಮಾ.**1** ರಿಂದ ಚಾಸಾ **1** ರವರಿಗೆ ಹಲ್ಲೆ ಮಾಡದಿದ್ದರೂ ನಾನು ಹಲ್ಲೆ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸಮವಸ್ತ್ರವನ್ನು ಎಳೆದಾಡಿ ಕೆಳಗೆ ಬೀಳಿಸಿರುತ್ತಾನೆ ಎಂದರೆ ಸರಿಯಲ್ಲ.

ಮು.ಮಾ.2 ನ್ನು ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಹಾಜರು ಪಡಿಸಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ 1 ನನ್ನ ಮೇಲಾಧಿಕಾರಿ ಇದ್ದು ಅವರ ಮಾತು ಕೇಳಿ ಮತ್ತು ತನಿಖಾಧಿಕಾರಿ ಹೇಳಿದಂತೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾ.1 ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹಲ್ಲೆ ಮಾಡಿರದಿದ್ದರೂ ಕೂಡ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1034/2016

| | | |
|---|---|---|
| ಸಾಕ್ಷಿದಾರರು ಹೆಸರು : | ಮಹದೇವೆಗೌಡ | ದಿನಾಂಕಃ 09.09.2025 ರಂದು |
| ತಂದೆಯ ಹೆಸರು : | ಜವನೇಗೌಡ | ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ವಯಸ್ಸು : | 52 ವರ್ಷ | |
| ಉದ್ಯೋಗ : | ಎಲ್ಕ್ಟಿಷಿಯನ್ | **CW-3** |
| ವಾಸಸ್ಥಳ : | ಕೋಟೆಗೌಡನಹುಂಡಿ ಗ್ರಾಮ. | **PW-3** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಆರೋಪಿ ನನಗೆ ಪರಿಚಯ. ಚಾಸಾ 1 ಮತ್ತು 2 ನನಗೆ ಪರಿಚಯವಿಲ್ಲ. ಸಾಕ್ಷಿ ಸ್ಥಳ ಮಹಜರನಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು , ಮಹಜರನ್ನು ನಿಪಿ 3 ಎಂದು, ಸಾಕ್ಷಿ ಸಹಿಯನ್ನು ನಿಪಿಃ3(ಎ) ಎಂದೂ ಗುರುತಿಸಲಾಯಿತು. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈಗ್ಗೆ 10 ವರ್ಷಗಳ ಹಿಂದೆ ನಾನು ಜಮೀನಿನಲ್ಲಿರುವಾಗ ಪೋಲೀಸರು ನಿಪಿಃ 3 ಕ್ಕೆ ಸಹಿ ಪಡೆದುಕೊಂಡಿರುತ್ತಾರೆ. ಘಟನೆಯಾದ ದಿನದಂದು ನಾನು ಸ್ಥಳದಲ್ಲಿ ಹಾಜರಿರಲಿಲ್ಲ ಮತ್ತು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ಮು.ಮಾ.1 ನ್ನು ನೋಡಿ ಗುರುತಿಸಿರುವುದಿಲ್ಲ.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ದಿನಾಂಕಃ 05.04.2016 ರಂದು ನಾನು ಚಾಸಾ 4 ರವರ ಅಂಗಡಿಯ ಬಳಿ ನಿಂತಿದ್ದಾಗ ಚಾಸಾ 1 ಮತ್ತು 2 ರವರು ಆರೋಪಿಯ ಕುರಿತು ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸಂಜೆ 6.00 ಗಂಟೆ ಸಮಯದಲ್ಲಿ ಆರೋಪಿ ನಾವು ನಿಂತಿದ್ದ ಸ್ಥಳಕ್ಕೆ ಬಂದಿದ್ದು ಚಾಸಾ 1 ಮತ್ತು 2 ರವರು ತಾವು ಬಂದ ವಿಚಾರ ತಿಳಿಸಿ ನೋಟೀಸ್ ತೆಗೆದುಕೊಳ್ಳಲು ತಿಳಿಸಿದಾಗ ಆರೋಪಿಯು ದೂರುದಾರರಾದ ಪುಟ್ಟಮ್ಮರವರಿಗೆ ಅವಾಚ್ಯವಾಗಿ ಬೈದು ಚಾಸಾ 1 ಮತ್ತು 2 ರವರಿಗೆ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಚಾಸಾ 2 ರವರ ಸಮವಸ್ತ್ರದ ಕುತ್ತಿಗೆ ಪಟ್ಟಿ ಹಿಡಿದು ಕೆಳಕ್ಕೆ ಬೀಳಿಸಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ 1 ರವರು ಚಾಸಾ 2 ರವರನ್ನು ಎಬ್ಬಿಸಲು ಹೋದಾಗ ಆರೋಪಿಯು ಮು.ಮಾ.1 ರಿಂದ ಚಾಸಾ 1 ರವರ ಕಿವಿಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ, ನಾನು, ಚಾಸಾ 4 ಮತ್ತು 6 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 1 ಮತ್ತು 2 ರವರು ಹಿಡಿಯಲು ಪ್ರಯತ್ನಿಸಿದಾಗ ಆರೋಪಿ ಅವರಿಗೆ ಕೊಲೆ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ.

ಮಾರನೇ ದಿನ ಬೆಳಿಗ್ಗೆ 10.15 ರಿಂದ 11.15 ರವರೆಗೆ ನಿಪಿ 3 ರಂತೆ ಮಹಜರ್ ಮಾಡಿ ಮು.ಮಾ.1 ನ್ನು ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ನಿಪಿ 3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು. ನಿಪಿ 3 ಮತ್ತು 4 ರಲ್ಲಿರುವ ಸಂಗತಿಗಳು ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.